ದಿನಾಂಕಃ 20/10/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ.ಆರ್.ಪಿ. ವಕೀಲರಿಂದಃ

ನ್ಯಾಯಾಲಯಕ್ಕೆ ಬಂದ ಮೇಲೆ ನಮ್ಮದಲ್ಲದ ಹೆಸರಿನಲ್ಲಿ ಸಾಕ್ಷಿ ನಡೆಯುವುದು ಕಾನೂನು ರೀತ್ಯಾ ಅಪರಾಧ ಎಂದರೆ ಸರಿ. ನಾನು ಈ ಪ್ರಕರಣವನ್ನು ಪಾಂಡು ಎನ್ನುವ ಹೆಸರಿನಲ್ಲಿ ದಾಖಲಾಸಿರುತ್ತೇನೆ ಎಂದರೆ ಸರಿ. ನನ್ನ ಖಾತೆಯನ್ನು ತೆಗೆದಾಗ ನನ್ನ ಹೆಸರು ಪಾಂಡು ಎಂದು ನೀಡಿರುತ್ತೇನೆ. ನನ್ನ ಪಾಸು ಪುಸ್ತಕದಲ್ಲಿ ಪಾಂಡುರಂಗ ಎಂದು ನಮೂದು ಇದೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಬ್ಯಾಂಕ್ ಮ್ಯಾನೇಜರ್ ಕರೆಯಿಸಿ ಸಾಕ್ಷ್ಯವನ್ನು ನುಡಿಸಲು ನನಗೆ ತೊಂದರೆ ಇರಲಿಲ್ಲ. ನನ್ನ ಸಹೋದರಿಯ ಹೆಸರು ರೇಣುಕಾ. ಅವರು ಮನೆ ನಂಬರ್ 4, ಹೌಸಿಂಗ್ ಬೋರ್ಡ್ ನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅವರ ಗಂಡನ ಹೆಸರು ತಾರನಾಥ್.

ನನ್ನ ಬಳಿ ಹಿರೋ ಹೊಂಡಾ ಸ್ಪೆಂಡರ್ ಬೈಕ್ ಇದೆ, ಅದರೆ ಸಂಖ್ಯೆ ಕೆಎ-13-ಇಪಿ-8866 ಆಗಿರುತ್ತದೆ. ಸದರಿ ಆರ್.ಸಿ. ದಾಖಲೆಯಲ್ಲಿ ಪಾಂಡುರಂಗ ಎಂದು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಾನು ಸದರಿ ವಾಹನದಲ್ಲಿ ಅಪಘಾತ ಮಾಡಿದ್ದು, ನನ್ನ ವಿರುದ್ಧ ಹೊಳೆನರಸೀಪುರ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಎಂ.ವಿ.ಸಿ. 1283/2022 ಪ್ರಕರಣ ದಾಖಲು ಆಗಿದೆ ಎಂದರೆ ಸರಿ. ಸಾಕ್ಷಿ ಎಂ.ವಿ.ಸಿ. ಅರ್ಜಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸಾಕ್ಷಿ ದೃಡೀಕೃತ ವಕಾಲತ್ ನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೃಡೀಕೃತ ತಕರಾರಿನಲ್ಲಿ ತನ್ನ ಸಹಿಯನ್ನು ಗುರುತಿಸಲು ತಿಳಿಸಿದ್ದು, ಸಾಕ್ಷಿ ಸದರಿ ತಕರರಾನ್ನು ನೋಡಿ ನನಗೆ ಓದಲು ಬರುವುದಿಲ್ಲ ಹಾಗೂ ಸಹಿಯು ನನ್ನದಲ್ಲ ಎಂದು ತಿಳಿಸಿರುತ್ತಾರೆ. ನಾನು ಸದರಿ ಪ್ರಕರಣದಲ್ಲಿ ತಕರಾರು ಸಲ್ಲಿಸಿರುವುದು ನನಗೆ ನೆನಪಿಲ್ಲ.

ಸಾಕ್ಷಿಯು ದೃಡೀಕೃತ ಚಾಲನಾ ಪರಾವನಿಗೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು. ನಾನು ಎಲ್.ಐ.ಸಿ. ಮೆಚ್ಯುರಿಟಿ ಆದ ನಂತರ ನನ್ನ ಸಹಿಯನ್ನು ಪಾಂಡುರಂಗ ಜಿ.ಬಿ. ಎಂದು ಮಾಡುತ್ತೇನೆ, ನನ್ನ ಶಾಲಾ ಟಿ.ಸಿ.ಯಲ್ಲಿ ಪಾಂಡುರಂಗ ಎಂದು ಇದೆ. ನನ್ನ ಶಾಲಾ ಟಿ.ಸಿ. ಹಾಗೂ ಎಲ್.ಐ.ಸಿ. ಬಾಂಡ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸರ್ಕಾರಿ ದಾಖಲೆಯಲ್ಲಿ ನನ್ನ ಹೆಸರು ಇರುತ್ತದೆಯೋ ಅದೇ ರೀತಿ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬೇಕು ಎಂದರೆ ಸರಿ. ನಾನು ಆರೋಪಿ ಹೆಸರಿನಲ್ಲಿ ದುರ್ಲಾಭ ಪಡೆಯಲು ಸುಳ್ಳು ಹೆಸರಿನಲ್ಲಿ ಪಿರ್ಯಾದು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹೆಸರು ಪಾಂಡು ಎಂದು ಹೇಳಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಈ ಪ್ರಕರಣದಲ್ಲಿ ನನ್ನ ಸಹಿಯನ್ನು ಪಾಂಡುರಂಗ ಎಂದು ಮಾಡಿದ್ದೇನೆ. ಆರೋಪಿ ಹಾಗೂ ನನ್ನ ಮಧ್ಯ ಯಾವುದಾದಾರು ವ್ಯವಹಾರ ನಡೆದಿದ್ದರೆ ನಾನು ಆರೋಪಿ ಬಳಿ ಚೆಕ್ ಅನ್ನು ಪಡೆಯುತ್ತಿದ್ದೆ ಎಂದರೆ ಸಾಕ್ಷಿಯು ನಾನು ಆರೋಪಿಯಿಂದ ಚೆಕ್ ಅನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಬ್ಯಾಂಕ್ ಖಾತೆಗಳಲ್ಲಿ ನನ್ನ ಹೆಸರನ್ನು ಪಾಂಡು ಎಂದು ಖಾತೆ ತೆಗೆದಿರುತ್ತೇನೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಜ್ಞಾನ ಇದೆ ಎಂದರೆ ಸರಿ. ಯಾವುದೇ ಒಂದು ಬ್ಯಾಂಕ್ ನಲ್ಲಿ ಹಣ ನಗದೀಕರಣ ಮಾಡಬೇಕಾದರೆ ಸದರಿ ಚೆಕ್ ನಲ್ಲಿ ಸಂಪೂರ್ಣ ಹೆಸರನ್ನು ನಮೂದಿಸಬೇಕು ಎಂದರೆ ಸರಿ.

ನನ್ನ ಹೆಸರನ್ನು ಮರೆಮಾಚಿ ನನ್ನ ಭಾವ ತಾರನಾಥ್ ಬಳಿ ಇದ್ದ ಖಾಲಿ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಗುಂಜೇವು ಗ್ರಾಮದವನಾಗಿದ್ದು, ಅಲ್ಲಿ ಮತವನ್ನು ಚಾಲಾಯಿಸುತ್ತಿದ್ದೇನೆ. ನನಗೆ 18 ವರ್ಷ ವಯಸ್ಸು ಆದಾಗಾ ನನ್ನ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿರುತ್ತದೆ. ಸಾಕ್ಷಿ ಮತದಾರರ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ.6 ಎಂದು ಗುರುತಿಸಲಾಯಿತು. ನನ್ನ ಹೆಸರು ಪಾಂಡು ಎಂದು ತಿಳಿಯಲು ನಾನು ವೋಟರ್ ಐ.ಡಿ.ಯನ್ನು ಹಾಜರುಪಡಿಸಬಲ್ಲೆ. ನನ್ನ ಆಧಾರ್ ಕಾರ್ಡ್, ರೇಶನ್ ಕಾರ್ಡ್ ಹಾಗೂ ಡಿ.ಎಲ್. ನಲ್ಲಿ ಪಾಂಡು ಎಂದು ಹೆಸರು ಇಲ್ಲ.

ನಾನು ಆರೋಪಿಯ ಮನೆಯ ಬಳಿ ಯಾವತ್ತು ಸಹ ಹೋಗಿರುವುದಿಲ್ಲ. ಆರೋಪಿಯು ಎಲ್ಲಿ ವಾಸವಾಗಿದ್ದಾರೆ ನನಗೆ ಗೊತ್ತಿಲ್ಲ. ಅವರು ಮನೆ ಕಟ್ಟಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಚೆಕ್ ಅನ್ನು ಹೊರತುಪಡಿಸಿ ಬೇರೆ ದಾಖಲೆಯನ್ನು ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ನಾನು ಹಾಜರುಪಡಿಸಿರುವ ಚೆಕ್ ನನ್ನ ಬಳಿ ಸುಮಾರು 6 ತಿಂಗಳುಗಳ ಕಾಲ ಇತ್ತು. ಚೆಕ್ ನ ಬಣ್ಣ ಗೊತ್ತಿಲ್ಲ. ನನ್ನ ಬಳಿ ಆರೋಪಿಯ ಯಾವುದೇ ಚೆಕ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಚೆಕ್ ನನ್ನ ಭಾವ ತಾರನಾಥ್ ರವರು ಚೀಟಿ ವ್ಯವಹಾರಕ್ಕೆ ಪಡೆದಂತಹ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ಸಾಲ ನೀಡಿದ ದಿನದಂದು ನನ್ನ ಖಾತೆಯಲ್ಲಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ನಿಜವಾಗಿಯೂ ಹಣವನ್ನು ನೀಡಿದ್ದರೆ ನಾನು ನನ್ನ ನಿಜವಾದ ಹೆಸರಿಗೆ ಚೆಕ್ ಪಡೆಯುತ್ತಿದ್ದೆ ಎನ್ನುವ ಪ್ರಶ್ನೆಗೆ ನಾನು ನಿಜವಾಗಿಯೂ ಆರೋಪಿಯಿಂದ ಚೆಕ್ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಪಿರ್ಯಾದು ಸಲ್ಲಿಸುವ ಸಮಯ ಅಂದರೆ ದಿನಾಂಕಃ 09.03.2018 ರಲ್ಲಿ ಪಾಂಡು ಎನ್ನುವ ಹೆಸರಿಗೆ ಯಾವುದಾದರೂ ಸರ್ಕಾರಿ ದಾಖಲೆ ಇತ್ತ ಎಂದರೆ ಸಾಕ್ಷಿಯು ನನ್ನ ಹೆಸರು ಪಾಂಡು ಎಂದು ಹೇಳಲು ದಾಖಲೆ ಇತ್ತು ಎಂದು ನುಡಿಯುತ್ತಾರೆ.

ಆರೋಪಿ ನನಗೆ ನಮ್ಮ ಭಾವನ ಮೂಲಕ ಪರಿಚಯ ಇರುತ್ತಾರೆ. ನನ್ನ ಹೆಸರು ಪಾಂಡು ಎಂದು ಹೇಳಲು ಐ.ಡಿ. ಕಾರ್ಡ್ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ. ನಾನು

ಆರೋಪಿಗೆ ಯಾವುದೇ ಹಣ ನೀಡಿಲ್ಲ, ಆರೋಪಿ ನನಗೆ ಪರಿಚಯ ಇರಲಿಲ್ಲ ಹಾಗೂ ಆರೋಪಿಗೆ ನಾನು ಹಣವನ್ನು ನೀಡಲು ನನಗೆ ಆರ್ಥಿಕ ಸಾಮಾರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ